ನೆಕ್ಲೇಸ್‌ಗಾಗಿ ಅತ್ತಳೋ, ಮುರಿದು ಭಗ್ನಗೊಂಡ ಮನಸ್ಸಿನ ಯಾತನೆಯಿಂದ ನರಳುತ್ತಿದ್ದ ಮಗಳನ್ನು ಕಂಡು ಅತ್ತಳೋ ದೇವರೆ ಬಲ್ಲ.

ಅವಳ ದೃಢ ನಿರ್ಧಾರವನ್ನು ಇಂತಹ ಘಟನೆಗಳು ಧೃತಿಗೆಡಿಸಲಿಲ್ಲ. ಮನೆಯ ಖರ್ಚನ್ನು ಅತ್ಯಂತ ಮಿತವ್ಯಯದಿಂದ ನಿರ್ವಹಿಸಿ ಅವಳು ಆದಷ್ಟು ಹಣವನ್ನು ಸಂಗ್ರಹಿಸ ತೊಡಗಿದಳು. ದುಡ್ಡು ಇರಲಿ ಇಲ್ಲದಿರಲಿ, ಸಾಲ ಮಾಡಿಯಾದರೂ ಅವಳು ತನ್ನ ಹೆಣ್ಣು ಮಕ್ಕಳ ಜಹೇಝ್‌ನ ಪ್ರತಿಯೊಂದು ಚಿಕ್ಕ ಪುಟ್ಟ ವಸ್ತುಗಳನ್ನು ಕೂಡ ಸಂಗ್ರಹಿಸ ತೊಡಗಿದಳು. ಆಗ ಅವಳಿಗೆ ತನ್ನ ಅಮ್ಮ ಹೇಳುತ್ತಿದ್ದ ಮಾತು ನೆನಪಿಗೆ ಬಂದಿತು. "ನೋಡು ಮಗು, ನನಗೆ ನನ್ನ ತವರು ಮನೆಯವರು ಅಪಾರ ಜಹೇಝುನ್ನು ಕೊಟ್ಟಿದ್ದರು. ಮಂಚ, ಕುರ್ಚಿ, ಪುಟ್ಟ ಕನ್ನಡಿ ಇರುವ ದೊಡ್ಡ ಡ್ರೆಸಿಂಗ್ ಟೇಬಲ್. ಆಗ ಅದೇ ಫ್ಯಾಷನ್ ಇತ್ತು ನೋಡು. ಚಪ್ಪರದಾನಿ ಇದ್ದ ಬೀಟೆ ಮರದ ಮಂಚದಿಂದ ಹಿಡಿದು ಚಿನ್ನ ಬೆಳ್ಳಿ ದೊಡ್ಡ ದೊಡ್ಡ ತಾಮ್ರದ ಪಾತ್ರೆಗಳು, ಹಂಡೆ, ನನ್ನ ಪಾದಕ್ಕೆ ಝಾಲರ್ ಪಟ್ಟಿಯ ಚೈನ್, ಝುಲಫಿ ತೋಡ – ಮೊದಲಾದವು. ಅಷ್ಟೇ ಅಲ್ಲದೇ ಜೊತೆಯಲ್ಲಿ ಆಟವಾಡುತ್ತಿದ್ದ ನನ್ನ ಗೊಂಬೆಗಳು ಒಂದು ಗಂಡು ಒಂದು ಹೆಣ್ಣು ಮತ್ತು ಆ ಗೊಂಬೆಗಳ ಜಹೇಝುನ್ನು ಕೂಡ ಮೂರು ಬೆತ್ತದ ಬುಟ್ಟಿ ತುಂಬ ಕೊಟ್ಟಿದ್ದರು" ಎಂದು ಹೇಳಿ ಅಮ್ಮ ಎದ್ದು ಬೀರುವಿನ ಬಾಗಿಲನ್ನು ತಗೆದು ನೀಳವಾದ ಒಂದು ಚಿನ್ನದ ಸೂಜಿಯನ್ನು ಆಕೆಯ ಕೈಗೆ ಇಡುತ್ತಿದ್ದಳು. ಆ ಸೂಜಿ ಸಾಲಿಹಾಗೆ ತುಂಬ ಇಷ್ಟವಾದದ್ದು.

‘‘ಈ ಚಿನ್ನದ ಸೂಜಿಯನ್ನು ಕೂಡ ನನ್ನ ತವರು ಮನೆಯವರು ನನ್ನ ಜಹೇಝ್‌ನಲ್ಲಿ ಕೊಟ್ಟಿದ್ದಾರೆ ನೋಡು" ಎಂದು ತೋರಿಸುತ್ತಲೇ ತನ್ನ ತವರು ಮನೆಯನ್ನು ನೆನೆದು ಅವಳು ಹನಿಗಣ್ಣಾಗುತ್ತಿದ್ದಳು. ಮತ್ತು ಸಾಲಿಹಾಳ ಕೈಯಿಂದ ಜೋಪಾನವಾಗಿ ಇಸಿದುಕೊಂಡು ಅದನ್ನು ಮಕಮಲ್ಲಿನ ಬಟ್ಟೆಯ ತುಂಡಿಗೆ ಚುಚ್ಚಿ ಬೆಳ್ಳಿಯ ಬಾಕ್ಸ್‌ನಲ್ಲಿ ಇಟ್ಟು ಆದರ ಪುಟ್ಟ ಮುಚ್ಚಳವನ್ನು ಹಾಕಿ ಜೋಪಾನವಾಗಿ ಎತ್ತಿಡುತ್ತಿದ್ದಳು.

ವೇಗವಾಗಿ ಹೆಜ್ಜೆ ಹಾಕುತ್ತಲೇ ಸಾಲಿಹಾ ತನ್ನ ತಾಯಿಯ ನೆನಪಿನಿಂದ ಆರ್ದ್ರವಾದಳು. ಆದರೆ ಆಕೆ ಅಷ್ಟೊಂದು ಹಾರು ನಡಿಗೆಯಲ್ಲಿ ರೆಕ್ಕೆ ಕಟ್ಟಿಕೊಂಡು ಓಡುತ್ತಿದ್ದುದರ ಹಿನ್ನೆಲೆಯಲ್ಲಿ ಒಂದು ಗುಟ್ಟಿತ್ತು. ಆ ದಿನ ಬೆಳಬೆಳಗ್ಗೆ ಇಮ್ರಾನಾ ಫೋನ್ ಮಾಡಿದ್ದಳು. "ಸಾಲಿಹಾ ಆಪಾ, ನೀವು ಎಂದಿನಿಂದಲೂ ಕೇಳುತ್ತಿದ್ದರಲ್ಲ ಬೇಡ್ ಶೀಟ್ ಸೆಟ್ಟನ್ನು ತಂದಿದ್ದೇನೆ. ರಾತ್ರಿ ತಡವಾಗಿ ಬೆಂಗಳೂರಿನಿಂದ ಬಂದೆ. ಹೀಗಾಗಿ ಮೊದಲಿಗೆ ನಾನು ನಿಮಗೆ ಫೋನ್ ಮಾಡತಾ ಇದ್ದೀನಿ. ಬೇಗ ಬಂದು ಆ ಸೆಟ್ಟನ್ನು ತೆಗೆದುಕೊಂಡು ಹೋಗಿ. ಬೇರೆ ಯಾರಾದರೂ ಕೈ ಹಾಕಿದ ಮೇಲೆ ಬೇಜಾರು ಮಾಡಿಕೊಂಡರೆ ನಾನೇನೂ ಮಾಡೋಕಾಗಲ್ಲ."

ಮನೆಗೆ ಬೀಗ ಜಡಿದು ಅವಳು ಓಡು ನಡಿಗೆಯಲ್ಲಿ ಇಮ್ರಾನಾಳ ಮನೆಯತ್ತ ಧಾವಿಸಿದಳು. ಮನೆಯಿಂದ ಹೊರಹೋಗುವಾಗ ಮೊಟ್ಟ ಮೊದಲ ಬಾರಿಗೆ ಆಕೆಗೆ ಯಾಕೋ ಅಳುಕೆನಿಸಿತು. ಅವಳ ಹೃದಯ ಮಮ್ಮಲ ಮರುಗಿತು. ಎಷ್ಟೊಂದು ಚೂಟಿಯಾಗಿ ಜಿಂಕೆಯಂತೆ ನೆಗೆಯುತ್ತಾ ಕಾಲೇಜಿಗೆ ಹೋಗುತ್ತಿದ್ದ ಹುಡುಗಿ ಹೀಗೆ ಬೋರಲಾಗಿ ಬಿದ್ದಿದ್ದಾಳೆ. ಅಲ್ಲಾ! ಎಂದು ಅವಳು ಅತ್ಯಂತ ದೀರ್ಘ ಶ್ವಾಸವನ್ನು ಹೊರ ಬಿಟ್ಟಳು. ಆ ಮೂಲಕ ತನ್ನ ದುಃಖವೆಲ್ಲವೂ ಧೂಮವಾಗಿ ಆಕಾಶವನ್ನು ಮುಟ್ಟಿ ತನ್ನ ಹೃದಯ ಹಗುರವಾಗುವುದು ಎಂದು ಅವಳು ಭಾವಿಸಿದಳು. ಮೆಹೆಕ್‌ಳ ಕೋಣೆಯೊಳಗೆ ಇಣುಕಿದಳು. ಹಗಲು ಹೊತ್ತಿನಲ್ಲೇ ಇದೆಂತಹ ದರಿದ್ರ ನಿದ್ರೆ ಎಂದು ಅವಳ ಮನಸ್ಸು ಮಿಡಿಯಿತು. ಆದರೂ ಕೂಡ ಅವಳ ನಿದ್ರೆಗೆ ಭಂಗ ತರ ಬಾರದೆಂಬ ಉದ್ದೇಶದಿಂದ ಅವಳ ಬೆನ್ನ ಮೇಲೆ ಲಘುವಾಗಿ ಕೈಯಿಟ್ಟು ಮೆಲುದನಿಯಲ್ಲಿ ಅವಳನ್ನು ಕರೆದಳು. "ಮೆಹೆಕ್ ಏಳು ಕಂದ, ಬಾಗಿಲು ಹಾಕಿಕೊ" ಎಂದು ಅನುನಯದ ಧ್ವನಿಯಲ್ಲಿ ಹೇಳಿದಳು. ಅವಳ ಒಂದೇ ಕೂಗಿಗೆ ಸಟ್ ಎಂದು